Downloaded From :http://cbseportal.com/

**Series JBB**

**SET-4**

**Code No. 13**

Roll No. | | | | | | | | |

Candidates must write the Code on the title page of the answer-book.

| | ಸೂಚನೆಗಳು | | NOTE |
|---|---|---|---|
| (I) | ಈ ಪ್ರಶ್ನೆ ಪತ್ರಿಕೆಯಲ್ಲಿ **11** ಮುದ್ರಿತ ಪುಟಗಳಿವೆಯೆಂಬುದನ್ನು ಪರಿಶೀಲಿಸಿ. | (I) | Please check that this question paper contains **11** printed pages. |
| (II) | ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿ ಕೊಟ್ಟಿರುವ ಕೋಡ್ ಸಂಖ್ಯೆಯನ್ನು ಉತ್ತರ ಪತ್ರಿಕೆಯ ಮುಖ ಪುಟದಲ್ಲಿ ಅಭ್ಯರ್ಥಿಯು ಬರೆಯಬೇಕು. | (II) | Code number given on the right hand side of the question paper should be written on the title page of the answer-book by the candidate. |
| (III) | ಈ ಪ್ರಶ್ನೆ ಪತ್ರಿಕೆಯಲ್ಲಿ **IX** ಪ್ರಶ್ನೆಗಳಿವೆ ಎಂಬುದನ್ನು ಗಮನಿಸಿ. | (III) | Please check that this question paper contains **IX** questions. |
| (IV) | ಉತ್ತರಿಸುವುದಕ್ಕೆ ಮೊದಲು ಪ್ರಶ್ನೆಯ ಕ್ರಮ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ಬರೆಯಿರಿ. | (IV) | Please write down the Serial Number of the question in the answer-book before attempting it. |
| (V) | ಈ ಪ್ರಶ್ನೆ ಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ ಪತ್ರಿಕೆಯನ್ನು 10.15 a.m. ಗೆ ವಿತರಿಸಲಾಗುವುದು. 10.15 a.m. ನಿಂದ 10.30 a.m. ರ ತನಕ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಬೇಕು ಮತ್ತು ಈ ಅವಧಿಯಲ್ಲಿ ಯಾವುದೇ ಉತ್ತರವನ್ನು ಉತ್ತರ ಪತ್ರಿಕೆಯಲ್ಲಿ ಬರೆಯಬಾರದು. | (V) | 15 minute time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer-book during this period. |

# ಕನ್ನಡ

# KANNADA

*ಅನುಮತಿಸಲಾದ ಸಮಯ : 3 ಗಂಟೆ* | *ಗರಿಷ್ಠ ಅಂಕಗಳು : 80*

*Time allowed : 3 hours* | *Maximum Marks : 80*


Downloaded From :http://cbseportal.com/ Courtesy : CBSE

Downloaded From : http://cbseportal.com/

**ಸೂಚನೆಗಳು :** ಈ ಪ್ರಶ್ನೆ ಪತ್ರಿಕೆಯು *A, B, C* ಮತ್ತು *D* ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.

| | | |
|---|---|---|
| **ವಿಭಾಗ – A** (ವಾಚನ ಮತ್ತು ಗ್ರಹಿಕಾ ಕೌಶಲ) | : | 12 ಅಂಕಗಳು |
| **ವಿಭಾಗ – B** (ಬರವಣಿಗೆ ಕೌಶಲ) | : | 15 ಅಂಕಗಳು |
| **ವಿಭಾಗ – C** (ಅನ್ವಯಿಕ ವ್ಯಾಕರಣ) | : | 18 ಅಂಕಗಳು |
| **ವಿಭಾಗ – D** (ಪಠ್ಯಗಳ ಅಧ್ಯಯನ) | : | 35 ಅಂಕಗಳು |

## ವಿಭಾಗ – A

## (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

**I.** 1. ಈ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ದೈಹಿಕ ನ್ಯೂನತೆ ಸಾಧನೆಗೆ ಅಡ್ಡಿಯಾಗುವುದಿಲ್ಲ ಎಂಬುದನ್ನು ಸಾಬೀತು ಪಡಿಸಿದವರಲ್ಲಿ ಗಾನಯೋಗಿ ಡಾ. ಪಂಡಿತ ಪುಟ್ಟರಾಜ ಗವಾಯಿಗಳು ಒಬ್ಬರು.

ಪುಟ್ಟರಾಜರು ಹಾವೇರಿ ಜಿಲ್ಲೆಯ ಹಾನಗಲ್ಲು ತಾಲ್ಲೂಕಿನ ದೇವರ ಹೊಸಪೇಟೆಯಲ್ಲಿ ಜಂಗಮ ದಂಪತಿಗಳಾದ ರೇವಣಯ್ಯ ಮತ್ತು ಸಿದ್ಧಮ್ಮ ಅವರ ಮಗನಾಗಿ 1914 ರ ಮಾರ್ಚ್ 3 ರಂದು ಜನಿಸಿದರು. ಅವರು ಆರು ತಿಂಗಳ ಮಗುವಾಗಿದ್ದಾಗ ಕಣ್ಣು ಬೇನೆ ಬಂದು ಎರಡೂ ಕಣ್ಣುಗಳ ದೃಷ್ಟಿ ಹೋಯಿತು.

ಬಾಲಕ ಪುಟ್ಟರಾಜನಿಗೆ ಹಾರ್ಮೋನಿಯಂ ನುಡಿಸುವ ಆಸೆ ಬಹಳವಾಗಿತ್ತು. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಸೋದರ ಮಾವ ಚಂದ್ರಶೇಖರಯ್ಯನವರ ಹಾರ್ಮೋನಿಯಂ ಹಿಡಿದು ತಲ್ಲೀನನಾಗಿ ನುಡಿಸಲಾರಂಭಿಸಿದ. ಅದರ ನಾದ ಮಾಧುರ್ಯಕ್ಕೆ ಮನಸೋತ ಅಕ್ಕಪಕ್ಕದ ಮನೆಯ ಜನರು ಮನೆಯೊಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಚಂದ್ರಶೇಖರಯ್ಯನವರು ಹಿಂದಿರುಗಿ ಮನೆಗೆ ಬಂದಾಗ ಅಲ್ಲಿಯ ದೃಶ್ಯವನ್ನು ಕಂಡು ನಿಬ್ಬೆರಗಾದರು. ಮಾವನ ಪಾದದ ಸಪ್ಪಳದಿಂದ ವಿಚಲಿತನಾದ ಬಾಲಕ ಕೂಡಲೇ ಹಾರ್ಮೋನಿಯಂ ನುಡಿಸುವುದನ್ನು ನಿಲ್ಲಿಸಿ "ಮಾವ, ತಪ್ಪಾತು ಕ್ಷಮಿಸು. ಇನ್ನು ಮುಂದೆ


Downloaded From : http://cbseportal.com/ Courtesy : CBSE

Downloaded From : http://cbseportal.com/

ಹಾರ್ಮೋನಿಯಂ ಮುಟ್ಟುವುದಿಲ್ಲ" ಎನ್ನುತ್ತ ಮಾವನ ಪಾದಗಳಿಗೆ ತಡಕಾಡಿದನು. ಕಣ್ಣೀರು ಸುರಿಸುತ್ತಿದ್ದ ಬಾಲಕನನ್ನು ಮಾವನು ಅಪ್ಪಿಕೊಂಡು "ಮಗು ಇಂದಿನಿಂದ ಇದು ನನ್ನ ಹಾರ್ಮೋನಿಯಂ ಅಲ್ಲ, ನಿನ್ನದು. ಇದು ನಿನ್ನ ಆಸ್ತಿ" ಎಂದರು ಅವರ ಪ್ರೋತ್ಸಾಹ ಹಾಗೂ ಆ ಅಂಧ ಬಾಲಕನ ಶ್ರದ್ಧೆ ಮತ್ತು ಆಸಕ್ತಿಗಳೇ ಅವನನ್ನು ಸಂಗೀತ ಲೋಕದಲ್ಲಿ ಧ್ರುವತಾರೆಯಾಗಿ ಬೆಳಗಿಸಿದವು.

**ಪ್ರಶ್ನೆಗಳು :**

(ಅ) ಪುಟ್ಟರಾಜ ಗವಾಯಿಗಳು ಎಲ್ಲಿ ಜನಿಸಿದರು ? *1*

(ಆ) ಪುಟ್ಟರಾಜರು ಅಂಧರಾಗಲು ಕಾರಣವೇನು ? *1*

(ಇ) ಕಣ್ಣೀರಿಡುತ್ತಿದ್ದ ಬಾಲಕನನ್ನು ಚಂದ್ರಶೇಖರಯ್ಯನವರು ಯಾವ ರೀತಿ ಸಂತೈಸಿದರು ? *2*

(ಈ) ಪುಟ್ಟರಾಜ ಗವಾಯಿಗಳ ಸಾಧನೆಗೆ ಯಾವ ಅಂಶಗಳು ಕಾರಣವಾದವು ? *2*

2. ಈ ಪದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ :

ನಾನೊಂದು ಏಣಿ ಎಷ್ಟೊಂದು ಜನರನ್ನು
ಎತ್ತಿ ಹಿಡಿದಿದ್ದೇನೆ !
ಎಷ್ಟೊಂದು ಮಂದಿಯ ಪ್ರಗತಿಗೆ
ಕಾರಣೀ ಭೂತವಾಗಿದ್ದೇನೆ.

ಒಂದೊಂದು ಹೆಜ್ಜೆಯ ಭಾರ ಹೊರುವಾಗ
ನಾ ಪಟ್ಟ ಪಾಡು ನನಗೇ ಗೊತ್ತು.
ಲೀಲಾಜಾಲವಾಗಿ ಮೇಲೇರಿದ ಇವರಿಗೆ
ಭಾರ ಹೊತ್ತವರ ಕಾಳಜಿಯೇ ಇಲ್ಲ.


Downloaded From : http://cbseportal.com/ Courtesy : CBSE

Downloaded From : http://cbseportal.com/

ನನ್ನ ಮೆಟ್ಟಿಲೇರಿ ಹೋದ ಕೆಲವರು
ನನ್ನನ್ನೇ ತಳ್ಳಿ ನೂಕಿದ್ದಾರೆ, ಕೃತಘ್ನರು !
ಕಾಲೂರುವ ನೆಲವನ್ನೇ ತಿರಸ್ಕರಿಸಿದ ಇವರು
ಆಕಾಶದಲ್ಲಿ ಎಷ್ಟು ಹೊತ್ತು ಹಾರಾಡುತ್ತಾರೆ ?
ಮತ್ತೆ ನನ್ನ ಆಸರೆ ಬೇಕೇ ಬೇಕು.

ಅಧಿಕಾರ, ಹಣ, ಅಂತಸ್ತಿನ ಬೆನ್ನೇರಿ
ಕೀರ್ತಿಯ ಅಮಲೇರಿದವರು
ಎಂದಾದರೂ ಅರಿಯಲೇಬೇಕು
ಸ್ನೇಹ, ಪ್ರೀತಿ, ಸದ್ಗುಣಗಳ ಬುನಾದಿಯೇ
ಶಾಶ್ವತವೆಂಬುದನು; ನೆನಪಿಡಲೇಬೇಕು
ಉಪಕರಿಸಿದವರ ಋಣ ಮರೆಯಲಾಗದೆಂಬುದನು.

**ಪ್ರಶ್ನೆಗಳು :**

(ಅ) ಏಣಿ ಜನರಿಗೆ ಮಾಡಿದ ಉಪಕಾರವೇನು ? *2*

(ಆ) ಏಣಿಯು ಕೆಲವರನ್ನು ಕೃತಘ್ನರೆಂದು ಏಕೆ ಹೇಳಿದೆ ? *1*

(ಇ) ಜನರು ಏನನ್ನು ಮರೆಯಬಾರದು ? *1*

(ಈ) ಜನರು ಏನನ್ನು ಅರಿಯಬೇಕು ? *2*

## ವಿಭಾಗ – B

## (ಬರವಣಿಗೆ ಕೌಶಲ) : 15 ಅಂಕಗಳು

**II.** ಕೆಳಗಿನ ಯಾವುದಾದರೂ **ಒಂದು** ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ : *6*

(ಅ) ಅಕ್ಷರ ದಾಸೋಹದ ಮಹತ್ವ

(ಆ) ಸ್ವಚ್ಛ ಭಾರತ ಅಭಿಯಾನ

(ಇ) ಜಾತೀಯತೆ ದೇಶದ ಪ್ರಗತಿಗೆ ಮಾರಕ


Downloaded From : http://cbseportal.com/ Courtesy : CBSE

Downloaded From : http://cbseportal.com/

**III.** ನಿಮ್ಮ ಶಾಲಾ ಗ್ರಂಥಾಲಯಕ್ಕೆ ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಕೃತಿಗಳನ್ನು ವಿ.ಪಿ.ಪಿ. ಮೂಲಕ ಕಳುಹಿಸಿ ಕೊಡುವಂತೆ ಕೋರಿ 'ಮುಖ್ಯಸ್ಥರು, ಪುಸ್ತಕ ಮಾರಾಟ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು' – ಇಲ್ಲಿಗೆ ಪತ್ರವನ್ನು ಬರೆಯಿರಿ. *5*

**ಅಥವಾ**

ದಿನಾಂಕ 25.02.2020 ರ ಪ್ರಜಾವಾಣಿ ದಿನಪತ್ರಿಕೆಯ ಜಾಹೀರಾತಿನ ಮೇರೆಗೆ 'ವಿವೇಕಾನಂದ ಶಿಕ್ಷಣ ಸಂಸ್ಥೆ, ಮಹಾತ್ಮ ಗಾಂಧಿ ರಸ್ತೆ, ಚಿಕ್ಕಮಗಳೂರು' – ಇಲ್ಲಿಯ ಮುಖ್ಯಸ್ಥರಿಗೆ ಸಂಗೀತ ಶಿಕ್ಷಕರ ಹುದ್ದೆಗಾಗಿ ಅರ್ಜಿಯನ್ನು ಬರೆಯಿರಿ.

**IV.** ನಿಮ್ಮ ಶಾಲೆಯಲ್ಲಿ 'ಕನ್ನಡ ರಾಜ್ಯೋತ್ಸವ' ವನ್ನು ಆಚರಿಸಿದ ಸಮಾರಂಭವನ್ನು ಕುರಿತು ವರದಿಯನ್ನು ಬರೆಯಿರಿ. *4*

## ವಿಭಾಗ – C

## (ಅನ್ವಯಿಕ ವ್ಯಾಕರಣ) : 18 ಅಂಕಗಳು

**V.** ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರವನ್ನು ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯನ್ನು ಹೆಸರಿಸಿ : *2*

   (i) ಒಮ್ಮೊಮ್ಮೆ

   (ii) ದಿಗ್ಮಂಡಲ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

   (i) ಇನ ತನೂಜ

   (ii) ಕಡೆಗಣ್ಣು

3. ಕೆಳಗಿನ ಪದ/ನುಡಿಗಟ್ಟುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ : *2*

   (i) ನಿಟ್ಟಿಸಿ ನೋಡು

   (ii) ಮೂಲೆಗೊತ್ತು


Downloaded From : http://cbseportal.com/ Courtesy : CBSE

Downloaded From : http://cbseportal.com/

4. ಕೆಳಗಿನ ಪದಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

(i) ತವಸಿ

(ii) ವ್ಯಾಪಾರಿ

5. ಈ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ : *1*

(i) ಪನ್ನಗ

(ii) ಹುಸಿ

6. ಈ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

(i) ಒಳಿತು

(ii) ಸ್ವರ್ಗ

7. ಈ ಪದಗಳಲ್ಲಿರುವ ಧಾತುಗಳನ್ನು ಗುರುತಿಸಿ ಬರೆಯಿರಿ : *1*

(i) ಹಾಡುತ್ತಾರೆ

(ii) ಮಾಡಿದೆವು

8. ಕೆಳಗಿನ ಗ್ರಾಮ್ಯ ಪದಗಳ ಗ್ರಾಂಥಿಕ ರೂಪವನ್ನು ಬರೆಯಿರಿ : *1*

(i) ಮೈಮ್ಯಾಗ

(ii) ಸಿಡಿದ್ಹಾಂಗ

9. ಕೆಳಗಿನ ಹಳೆ / ಹೊಸ ಕನ್ನಡ ವಿಭಕ್ತಿಯನ್ನು ಹೆಸರಿಸಿ : *1*

(i) ಅರಸಂಗೆ

(ii) ಬಳ್ಳಿಗಳನ್ನು

10. ಮೊದಲೆರಡು ಪದಗಳಿಗಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ : *1*

(i) ನಮೋನಮೋ : ದ್ವಿರುಕ್ತಿ : : ಹಾಡು ಹಸೆ : __________

(ii) ನದಿ : ರೂಢನಾಮ : : ಭೀಮ : __________

11. ಈ ವಾಕ್ಯವನ್ನು ಭವಿಷ್ಯತ್ ಕಾಲಕ್ಕೆ ಬದಲಾಯಿಸಿ : *1*

"ಸಾವಿರಾರು ಪ್ರವಾಸಿಗರು ಈ ಸ್ಥಳಕ್ಕೆ ಭೇಟಿ ನೀಡುತ್ತಾರೆ."


Downloaded From : http://cbseportal.com/ Courtesy : CBSE

Downloaded From : http://cbseportal.com/

12. ಈ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಪರಿವರ್ತಿಸಿ : *1*
“ಭಕ್ತರು ಬೆಳ್ಳಿಯ ರಥವನ್ನು ಎಳೆದರು.”

13. ಈ ವಾಕ್ಯವನ್ನು ಸಂಭವನಾರ್ಥಕ ರೂಪಕ್ಕೆ ಬದಲಾಯಿಸಿ : *1*
“ನನ್ನ ತಂದೆಯು ನನಗೆ ಹೊಸ ಬಟ್ಟೆಯನ್ನು ತರುತ್ತಾರೆ.”

14. ಕೆಳಗಿನ ಗಾದೆ ಮಾತುಗಳಲ್ಲಿ ಒಂದನ್ನು ವಿವರಿಸಿ : *2*
(i) “ಮಾತೇ ಮುತ್ತು, ಮಾತೇ ಮೃತ್ಯು”
(ii) “ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.”

## ವಿಭಾಗ – D

## (ಪದ್ಯಗಳ ಅಧ್ಯಯನ) : 35 ಅಂಕಗಳು

**VI.** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *1×10=10*

1. ಸರ್. ಎಮ್. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಈ ದಿನಾಚರಣೆಯನ್ನು ಆಚರಿಸಲಾಗುತ್ತಿದೆ :
(i) ಶಿಕ್ಷಕರ ದಿನಾಚರಣೆ
(ii) ಪರಿಸರ ದಿನಾಚರಣೆ
(iii) ಎಂಜಿನೀಯರ್ಸ್ ದಿನಾಚರಣೆ
(iv) ವೈದ್ಯರ ದಿನಾಚರಣೆ

2. ತನಗೆ ಮನೆ ಬೇಡವೆಂದು ಹೇಳಿದ ದೇವತೆ :
(i) ದೇವೀರಮ್ಮ
(ii) ಮನೆ ಮಂಚಮ್ಮ
(iii) ಮನೆ ಮಾದಮ್ಮ
(iv) ಬನಶಂಕರಮ್ಮ


Downloaded From : http://cbseportal.com/ Courtesy : CBSE

Downloaded From :http://cbseportal.com/

3. ಅಶೋಕ ಪೈ ಅವರು ಈ ವೃತ್ತಿಯನ್ನು ಮಾಡುತ್ತಿದ್ದರು :

   (i) ವೈದ್ಯಕೀಯ

   (ii) ಉಪಾಧ್ಯಾಯ

   (iii) ಎಂಜಿನೀಯರ್

   (iv) ವ್ಯವಸಾಯ

4. ಶಾನುಭೋಗರು ತಮ್ಮ ಹಳ್ಳಿಗೆ ಹಿಂದಿರುಗಲು ಈ ಕಣಿವೆಯನ್ನು ದಾಟಿ ಹೋಗಬೇಕಿತ್ತು :

   (i) ಶಂಬುಲಿಂಗನ

   (ii) ನಾಗರ ಹೊಳೆ

   (iii) ಕೈಬರ್

   (iv) ಮದಲಿಂಗನ

5. ಇದು 'ಗೋವಿನ ಹಾಡು' ಕಥನ ಕಾವ್ಯದಲ್ಲಿ ಬರುವ ಗೋವಿನ ಹೆಸರು :

   (i) ಕಾಮಧೇನು

   (ii) ಪುಣ್ಯಕೋಟಿ

   (iii) ನಂದಿನಿ

   (iv) ಗೌರಿ

6. 'ಸಂಕಲ್ಪ' ಕವಿತೆಯ ಆಕರ ಕೃತಿ ಇದಾಗಿದೆ :

   (i) ಎದೆ ತುಂಬಿ ಹಾಡಿದೆನು

   (ii) ಸಾಮಗಾನ

   (iii) ನಾಡ ಗೀತೆಗಳು

   (iv) ಸಖೀ ಗೀತ


Downloaded From :http://cbseportal.com/ Courtesy : CBSE

Downloaded From : http://cbseportal.com/

7. ಕುಮಾರವ್ಯಾಸ ಕವಿಗೆ ಈ ಬಿರುದಿದೆ :

(i) ಕವಿ ಪುಂಗವ

(ii) ರೂಪಕ ಸಾಮ್ರಾಜ್ಯ ಚಕ್ರವರ್ತಿ

(iii) ಉಪಮಾಲೋಲ

(iv) ಆದಿ ಕವಿ

8. ಲವನು ಕುದುರೆಯನ್ನು ಇದರಿಂದ ಕಟ್ಟಿ ಹಾಕಿದನು :

(i) ಹಗ್ಗದಿಂದ

(ii) ಬಳ್ಳಿಯಿಂದ

(iii) ಬಾಳೇ ನಾರಿನಿಂದ

(iv) ಉತ್ತರೀಯದಿಂದ

9. ಜಗತ್ತೆಂಬ ಹಡಗನ್ನು ಈ ಬೆಳಕಿನಲ್ಲಿ ಮುನ್ನಡೆಸಬೇಕೆಂದು ಕವಿ ಜಿ.ಎಸ್. ಶಿವರುದ್ರಪ್ಪನವರು ಹೇಳಿದ್ದಾರೆ :

(i) ಸೂರ್ಯನ ಕಿರಣದ ಬೆಳಕಿನಲ್ಲಿ

(ii) ಚಂದ್ರನ ಬೆಳದಿಂಗಳ ಬೆಳಕಿನಲ್ಲಿ

(iii) ಪ್ರೀತಿಯ ಹಣತೆಯ ಬೆಳಕಿನಲ್ಲಿ

(iv) ವಿದ್ಯುಚ್ಛಕ್ತಿ ಬೆಳಕಿನಲ್ಲಿ

10. ಲವನು ಅಶ್ವಮೇಧದ ಕುದುರೆಯನ್ನು ಕಟ್ಟಿದಾಗ ವಾಲ್ಮೀಕಿ ಮುನಿಗಳು ಎಲ್ಲಿಗೆ ಹೋಗಿದ್ದರು :

(i) ವರುಣ ಲೋಕಕ್ಕೆ

(ii) ದೇವೇಂದ್ರನ ಸಭೆಗೆ

(iii) ಬ್ರಹ್ಮ ಲೋಕಕ್ಕೆ

(iv) ಮರ್ತ್ಯ ಲೋಕಕ್ಕೆ



Downloaded From : http://cbseportal.com/ Courtesy : CBSE

Downloaded From : http://cbseportal.com/

**VII.** ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *3×4=12*

1. ಮುದುಕಿಯು ರಾಹಿಲನ ಬಳಿ ಯುದ್ಧದ ಬಗೆಗೆ ತಿರಸ್ಕಾರದಿಂದ ನುಡಿದ ಮಾತುಗಳಾವುವು ?

2. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

   "ಸಾಮಾಜಿಕ ಕಾನೂನುಗಳ ಹರಿಕಾರ"

   **ಅಥವಾ**

   "ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"

3. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳಾವುವು ?

4. ಸಂದರ್ಭದೊಂದಿಗೆ ಸ್ವಾರಸ್ಯವನ್ನು ವಿವರಿಸಿ :

   "ಸಾರ್ವಭೌಮರಾ ನೆತ್ತಿಯ ಕುಕ್ಕಿ"

   **ಅಥವಾ**

   "ಹಸುರಾದುದೊ ಕವಿಯಾತ್ಮಂ"

**VIII.** ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ : *4×2=8*

1. ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ ? ಹುಲಿಯ ಧರ್ಮವೇ ? ಸಮರ್ಥನೆಯೊಂದಿಗೆ ವಿವರಿಸಿ.

   **ಅಥವಾ**

   ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

2. ಹಲಗಲಿ ಬೇಡರು ಬ್ರಿಟಿಷರ ವಿರುದ್ಧ ಶೌರ್ಯವನ್ನು ಹೇಗೆ ಮೆರೆದರು ? ಅದರ ಪರಿಣಾಮವೇನಾಯಿತು ?

   **ಅಥವಾ**

   ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?


Downloaded From : http://cbseportal.com/ Courtesy : CBSE

Downloaded From : http://cbseportal.com/

**IX.** ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರವನ್ನು ಬರೆಯಿರಿ :
(ಪಠ್ಯ ಪೋಷಕ ಅಧ್ಯಯನದಿಂದ) *1×5=5*

1. ವಿವೇಕಾನಂದರನ್ನು 'ಮಾನವತಾ ಮಿತ್ರ' ರೆಂದು ಕರೆದವರಾರು ?

2. ಪುಟ್ಟ ಪೋರಿ ಏನು ಮಾಡುತ್ತಿದ್ದಾಳೆ ?

3. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ ?

4. ಮೃಗದ ಬಗೆಗೆ ಸುಂದರಿಯ ಮನ ಏಕೆ ಕರಗುತ್ತಿತ್ತು ?

5. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಹೇಗೆ ತೊಂದರೆ ಕೊಡುತ್ತದೆ ?


Downloaded From : http://cbseportal.com/ Courtesy : CBSE